ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 07.03.2024.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ.ಹೆಚ್.ಹೆಚ್. ವಕೀಲರಿಂದಃ**

ನನ್ನ ತಂದೆ ಹೆಸರು ಹೈದರ್ ಸಾಬ ಎಂದರೆ ಸರಿ, ಅವರು ದಿಃ 09.03.2021 ರಂದು ತಿರಿಕೊಂಡಿರುತ್ತಾರೆ. ನನ್ನ ದಾವೆಯಲ್ಲಿ ನನ್ನ ತಂದೆ ದಿಃ 09.02.2021 ರಂದು ತಿರಿಕೊಂಡಿರುತ್ತೇನೆ ಎಂದು ಬರೆದಿರುತ್ತೇನೆ ಎಂದರೆ ಸರಿ. ನನ್ನ ತಂದೆ ಭೂಸನೂರು ಗ್ರಾಮದಲ್ಲಿ ದಾವಾ ಆಸ್ತಿಯನ್ನು ಯಾವ ವರ್ಷ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸುಮಾರು 6 ಎಕರೆ 10 ಗುಂಟೆ ಜಮೀನು ಖರೀದಿಸಿರುತ್ತಾರೆ. ಅದನ್ನು ರೂ.60,000/- ಹಣಕ್ಕೆ ಖರೀದಿಸಿರುತ್ತಾರೆ. ಅದರಲ್ಲಿ ನನ್ನ ತಂದೆ 2 ಎಕರೆ ಮಾರಾಟ ಮಾಡಿರುತ್ತಾರೆ. ನನ್ನ ತಂದೆ ಖರೀದಿ ಹಿಡಿದ 6 ಎಕರೆ ಪೈಕಿ 2 ಎಕರೆಯನ್ನು 20 ವರ್ಷ ಬಿಟ್ಟು ಮಾರಾಟ ಮಾಡಿರುತ್ತಾರೆ. ನನ್ನ ತಂದೆಗೆ 6 ಎಕರೆ 10 ಗುಂಟೆ ಜಮೀನು ಖರೀದಿಮಾಡಲು ನಾನು ಹಣ ಕೊಟ್ಟಿಲ್ಲ, ಏಕೆಂದರೆ ನಾನು ಸಣ್ಣವನು ಇದ್ದೆ.

ನನ್ನ ತಂದೆ ಮುಂಬೈಯಲ್ಲಿ ಸಂಚಾರಿ ಪೊಲೀಸ್ ಆಗಿದ್ದರು. ನನ್ನ ತಂದೆ ಸುಮಾರು 15 ವರ್ಷ ಸೇರಿ ಸಲ್ಲಿಸಿರುತ್ತಾರೆ. ನನ್ನ ತಂದೆಗೆ ವೇತನ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಯಾವುದೇ ಪಿಂಚಣಿ ಬರುತ್ತಿರಲಿಲ್ಲ. ದಾವಾ ಸ್ವತ್ತುಗಳು ಅಲ್ಲದೇ ನನ್ನ ತಂದೆ ಮುಂಬೈಯಲ್ಲಿ ಒಂದು ಮನೆ ಖರೀದಿಸಿರುತ್ತಾರೆ ಎಂದರೆ ಸರಿ. ಮೊದಲು ನನ್ನ ತಂದೆ ಮುಂಬೈಯಲ್ಲಿನ ಮನೆಯನ್ನು ಖರೀದಿ ಮಾಡಿರುತ್ತಾರೆ, ನಂತರದಲ್ಲಿ ದಾವಾ ಸ್ವತ್ತುಗಳನ್ನು ಖರೀದಿಸಿರುತ್ತಾರೆ. ನನ್ನ ತಂದೆ ಮುಂಬೈದಲ್ಲಿರುವ ಮನೆಯನ್ನು ಮಾರಿರುತ್ತಾರೆ ಎಂದರೆ, ಸಾಕ್ಷಿ ನನ್ನ ತಾಯಿ ಕ್ಯಾನ್ಸರ್ ಕಾಯಿಲೆಯಿಂದ ಮಾರಾಟ ಮಾಡಿರುತ್ತಾರೆ ಎಂದು

ನುಡಿಯತ್ತಾರೆ. ನನ್ನ ತಾಯಿಯ ಹೆಸರು ಜಮಿಲಾಬೀ ಇರುತ್ತದೆ, ಅವಳು 2001 ರಲ್ಲಿ ತಿರಿಕೊಂಡಿರುತ್ತಾರೆ.

ನನ್ನ ತಂದೆ 2 ಎಕರೆ ಜಮೀನನ್ನು ಎಷ್ಟು ಹಣಕ್ಕೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮುಂಬೈಯಲ್ಲಿನ ಮನೆಯನ್ನು ರೂ.6 ಲಕ್ಷಕ್ಕೆ ಮಾರಾಟ ಮಾಡಿರುತ್ತಾರೆ. ನನ್ನ ತಾಯಿ ಮೃತಪಟ್ಟಾಗ ನನ್ನ ಮದುವೆಯಾಗಿರಲಿಲ್ಲ, ನನ್ನ ಅಣ್ಣ-ತಮ್ಮಂದಿರ ಮದುವೆಯಾಗಿತ್ತು, ಅದೇ ರೀತಿ ನನ್ನ ತಂಗಿಯ ಮದುವೆ ಕೂಡಾ ಆಗಿತ್ತು. ನನ್ನ ತಾಯಿ ಮೃತಪಟ್ಟಾಗ ಮುಂಬೈಯಲ್ಲಿ ನಮ್ಮ ಜೊತೆ ಇದ್ದರು. ಆ ಕಾರಣ ಭೂಸನೂರು ಮನೆಯನ್ನು ಕೀಲಿ ಹಾಕಿದ್ದೇವು. ನನ್ನ ತಾಯಿ ಮೃತಪಟ್ಟ ಒಂದು ವರ್ಷಕ್ಕೆ 1 ನೇ ಪ್ರತಿವಾದಿ ಮದುವೆಯಾಗಿರುತ್ತದೆ.

ನನ್ನ ತಂದೆ 1 ನೇ ಪ್ರತಿವಾದಿಯನ್ನು ಕೊರಳ್ಳಿ ಗ್ರಾಮದಲ್ಲಿ ಮದುವೆಯಾಗಿರುತ್ತಾರೆ. ಮದುವೆ ಕಾಲಕ್ಕೆ ನಾನು ಹಾಜರು ಇರಲಿಲ್ಲ, ಏಕೆಂದರೆ ನಮಗೆ ಬರುವುದು ಆಗಿರುವುದಿಲ್ಲ. ನಮ್ಮ ತಂದೆ 2 ನೇ ಮದುವೆಗೆ ನಾನಾಗಲಿ ಅಥವಾ ನಮ್ಮ ಅಣ್ಣ-ತಮ್ಮಂದಿರು ಆಗಲಿ ಯಾರು ಬಂದಿರುವುದಿಲ್ಲ. ನನ್ನ ತಂದೆ 2 ನೇ ಮದುವೆಯಾದ 1 ನೇ ಪ್ರತಿವಾದಿ ಜೊತೆ ನಮ್ಮ ಮನೆಗೆ ಮುಂಬೈಗೆ ಬಂದಿದ್ದರು ಮತ್ತು ಹೋಗುವುದು ಬರುವುದು ಮಾಡುತ್ತಿದ್ದರು. ನಾವು ನಮ್ಮ ತಂದೆಗೆ 2 ನೇ ಮದುವೆ ಮಾಡಿಕೊಳ್ಳಬೇಡಿ ಎಂದು ತಕರಾರು ಮಾಡಿದ್ದೇವು, ಆ ಕಾರಣ ನಾವೆಲ್ಲರು 2 ನೇ ಮದುವೆಗೆ ಹೋಗಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಜೊತೆ ನಮ್ಮ ಸಂಬಂಧ ಯಾವತ್ತು ಒಳ್ಳೆಯದು ಇರಲಿಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ಗಂಡ ಗೌಸ್‌ಪಾಕ್ ರವರು ನನ್ನ ತಂದೆ ಸಾಯುವ ಮುಂಚೆನೆ

ತಿರಿಕೊಂಡಿದ್ದರು ಎಂದರೆ ಸರಿ. ಅವರಿಗೆ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ, ಒಬ್ಬ ಮಗ ಇರುತ್ತಾನೆ. ಸದರಿ ಮೂರು ಜನ ಹೆಣ್ಣು ಮಕ್ಕಳು ಮತ್ತು ಗಂಡು ಮಗನನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿರುವುದಿಲ್ಲ. ನನ್ನ ತಂದೆಗೆ ಆರಾಮವಿರಲಿಲ್ಲ ಆ ಕಾರಣ ಅವರನ್ನು ಮುಂಬೈಗೆ ಕರೆದುಕೊಂಡು ಹೋಗಿದ್ದೇವು, ಏಕೆಂದರೆ ಅವರಿಗೆ ತುಂಬಾ ಹೃದಯಾಘಾತ ಕಾಯಿಲೆ ಆಗಿತ್ತು. ನನ್ನ ತಂದೆಯನ್ನು ಬಾಂಬೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇವೆ. ನನ್ನ ತಂದೆಯನ್ನು ಒಂದು ವಾರಗಳ ಕಾಲ ಆಸ್ಪತ್ರೆಯಲ್ಲಿ ಇಟ್ಟಿದ್ದೇವು. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ತಂದೆಗೆ ಸುಮಾರು ರೂ.2 ಲಕ್ಷ ಖರ್ಚು ಮಾಡಿರುತ್ತೇವೆ ಹಾಗೂ 6 ತಿಂಗಳ ಕಾಲ ಅವರನ್ನು ನೋಡಿಕೊಂಡಿರುತ್ತೇವೆ.

ನನ್ನ ತಂದೆಗೆ ಖರ್ಚು ಮಾಡಿದ ಆಸ್ಪತ್ರೆಯ ಬಿಲ್‌ಗಳನ್ನು ಹಾಜರುಪಡಿಸಿಲ್ಲ, ಅವುಗಳು ಎಲ್ಲವು ನನ್ನ ತಂದೆ ಪ್ರತಿವಾದಿ ಬಳಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯನ್ನು ಮುಂಬೈಗೆ ಕರೆದುಕೊಂಡು ಹೋದಾಗ 1ನೇ ಪ್ರತಿವಾದಿಯರನ್ನು ಕುರಿತು ಕೇಳಿರುತ್ತೇವೆ, ಆದರೆ ಅವರು ನಮ್ಮ ಜೊತೆ ಬಂದಿರುವುದಿಲ್ಲ. ನನ್ನ ತಂದೆಗೆ ಸುಮಾರು ಖರ್ಚು ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಆರಾಮವಿಲ್ಲದೇ ಸಮಯದಲ್ಲಿ 1ನೇ ಪ್ರತಿವಾದಿ ತನ್ನ ಸಂಬಂಧಿಕರ ಜೊತೆ ನನ್ನ ತಂದೆಯನ್ನು ಕಲಬುರಗಿ ಮತ್ತು ಹೈದ್ರಾಬಾದ್ ಆಸ್ಪತ್ರೆಯಲ್ಲಿ ತೋರಿಸಿರುತ್ತಾಳೆ ಎಂದರೆ, ಸಾಕ್ಷಿ ನಮಗೆ ಹೇಳಿಲ್ಲ ಹೇಳಿದ್ದರೆ ನಾವು ಬರುತ್ತಿದ್ದೇವು ಎಂದು ನುಡಿಯುತ್ತಾರೆ.

ನನ್ನ ತಂದೆ 2020ರ ಎಪ್ರಿಲ್ ತಿಂಗಳನಿಂದ 6 ತಿಂಗಳವರೆಗೆ ನನ್ನ ತಂದೆಯನ್ನು ಮುಂಬೈಗೆ ಕರೆದುಕೊಂಡು ಹೋಗಿದ್ದೇವು. ನನ್ನ ತಂದೆಗೆ ಔಷಧಿಗಳನ್ನು ಕಲಬುರಗಿ

ಆಸ್ಪತ್ರೆಯಲ್ಲಿ ಆತನ ಹೆಸರಿನಲ್ಲಿಯೇ ಖರೀದಿ ಮಾಡಿ ನಾವು ತಂದು ಕೊಡುತ್ತಿದ್ದೇವು. ಈ ಬಗ್ಗೆ ದಾವೆಯಲ್ಲಿ ಹೇಳಿ ಬರೆಯಿಸಿಲ್ಲ. ನಾವು ಯಾವುದೇ ಖರ್ಚು ಮಾಡದೇ ಇರುವ ಕಾರಣ ಬರೆಯಿಸಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**